# ಕರ್ನಾಟಕ ವಿಧಾನ ಪರಿಷತ್

| | |
|---|---|
| ಮಾನ್ಯ ಸದಸ್ಯರ ಹೆಸರು | ಶ್ರೀ ಹೆಚ್ ಎಸ್ ಗೋಪಿನಾಥ್ (ಸ್ಥಳೀಯ ಸಂಸ್ಥೆಗಳಿಂದ ಚುನಾಯಿತರಾದವರು) |
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 405 |
| ಉತ್ತರಿಸಬೇಕಾದ ದಿನಾಂಕ | 10.12.2025 |
| ಉತ್ತರಿಸಬೇಕಾದ ಸಚಿವರು | ವಸತಿ, ವಕ್ಫ್ ಮತ್ತು ಅಲ್ಪ ಸಂಖ್ಯಾತರ ಕಲ್ಯಾಣ ಸಚಿವರು |

| ಕ್ರ ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಕಳೆದ 2 ವರ್ಷಗಳಲ್ಲಿ ಬೆಂಗಳೂರು ನಗರ ಜಿಲ್ಲೆಯಲ್ಲಿ ವಿವಿಧ ಯೋಜನೆಗಳನ್ವಯ ಎಷ್ಟು ಮನೆಗಳನ್ನು ಹಂಚಿಕೆ ಮಾಡಲಾಗಿದೆ; (ಯೋಜನಾವಾರು ವಿವರ ನೀಡುವುದು) | ಕಳೆದ 2 ವರ್ಷಗಳಲ್ಲಿ ಅಂದರೆ 2023-24 ಮತ್ತು 2024-25ನೇ ಸಾಲಿನಲ್ಲಿ ಬೆಂಗಳೂರು ನಗರ ಜಿಲ್ಲೆಯಲ್ಲಿ ರಾಜ್ಯದ ವಿವಿಧ ವಸತಿ ಯೋಜನೆಗಳಡಿ ಯಾವುದೇ ಮನೆಗಳನ್ನು ಹಂಚಿಕೆ ಮಾಡಿರುವುದಿಲ್ಲ.<br><br>2024-25ನೇ ಸಾಲಿನಲ್ಲಿ ಕೇಂದ್ರ ಪುರಸ್ಕೃತ ಪಿ.ಎಮ್.ಎ.ವೈ. (ಗ್ರಾಮೀಣ) ಯೋಜನೆಯಡಿ ಒಟ್ಟು 1347 ಮನೆಗಳನ್ನು ಹಂಚಿಕೆ ಮಾಡಲಾಗಿದೆ.<br><br>ಬೆಂಗಳೂರು ನಗರ ಜಿಲ್ಲೆಯಲ್ಲಿ ರಾಜೀವ್ ಗಾಂಧಿ ವಸತಿ ನಿಗಮ ನಿಯಮಿತದಿಂದ "1 ಲಕ್ಷ ಬಹುಮಹಡಿ ಬೆಂಗಳೂರು ವಸತಿ ಯೋಜನೆ"ಯನ್ನು ಅನುಷ್ಠಾನ ಮಾಡಲಾಗುತ್ತಿದ್ದು, ದಿನಾಂಕ: 01.04.2023 ರಿಂದ 28.11.2025 ರವರೆಗೆ ಆನ್ಲೈನ್ ಮುಖಾಂತರ 1 BHK ಯ 15,507 ಮನೆಗಳಿಗೆ ಹಾಗೂ 2 BHK ಯ 4,357 ಮನೆಗಳಿಗೆ ಅರ್ಜಿಗಳು ಸ್ವೀಕೃತವಾಗಿದ್ದು, ಈ ಪೈಕಿ 1 BHK ಯ 6,963 ಫಲಾನುಭವಿಗಳು ಹಾಗೂ 2 BHKಯ 274 ಫಲಾನುಭವಿಗಳು ಪ್ರಾರಂಬಿಕ ರೇವಣಿಯನ್ನು ಪಾವತಿಸಿ, ಫ್ಲಾಟ್ ಗಳನ್ನು ಆಯ್ಕೆ ಮಾಡಿಕೊಂಡಿರುತ್ತಾರೆ.<br><br>ಅಲ್ಲದೆ ವಿಶೇಷ ವರ್ಗದ ಗುಂಪಿನ ಫಲಾನುಭವಿಗಳಿಗೆ PMAY U-AHP ಘಟಕದಡಿ ನಿಗಮದಿಂದ ಈ ಕೆಳಗಿನ ಎರಡು ಯೋಜನೆಗಳಡಿ ಒಟ್ಟು 1488 ಮನೆಗಳನ್ನು ನಿರ್ಮಿಸಲು ಕೈಗೆತ್ತಿಕೊಳ್ಳಲಾಗಿದೆ. ವಿವರ ಈ ಕೆಳಗಿನಂತಿದೆ. |

| ಜಿಲ್ಲೆ | ಯೋಜನಾ ಪ್ರದೇಶ | ಮನೆಗಳ ಸಂಖ್ಯೆ | ಪೂರ್ಣ | ಪ್ರಗತಿ | ಪ್ರಾರಂಭವಾಗಬೇಕಾದ | ಹಂಚಿಕೆ |
|---|---|---|---|---|---|---|
| ಬೆಂಗಳೂರು ನಗರ | ಗುಂಜೂರು | 1008 | 180 | 788 | 40 | 179 |
| | ಮಾರೇನ ಹಳ್ಳಿ | 480 | 244 | 236 | 0 | 0 |
| **ಒಟ್ಟು** | | **1488** | **424** | **1024** | **40** | **179** |

<table>
<tr><td>ಆ)</td><td>ಕಳೆದ 2 ವರ್ಷಗಳಲ್ಲಿ ಮನೆಗಳನ್ನು ಕಟ್ಟಲು ಪ್ರಾರಂಭಿಸಿರುವ ಸಂಖ್ಯೆ ಎಷ್ಟು;</td><td>ಬೆಂಗಳೂರು ನಗರ ಜಿಲ್ಲೆಯಲ್ಲಿ ರಾಜೀವ್ ಗಾಂಧಿ ವಸತಿ ನಿಗಮ ನಿಯಮಿತದಿಂದ "1 ಲಕ್ಷ ಬಹುಮಹಡಿ ಬೆಂಗಳೂರು ವಸತಿ ಯೋಜನೆ"ಯಡಿ 2023-24, 2024-25ನೇ ಸಾಲಿನಲ್ಲಿ 1 BHK (ಜಿ+3) ಮಾದರಿಯಲ್ಲಿ 1920 ಬಹುಮಹಡಿ ಮನೆಗಳನ್ನು ನಿರ್ಮಿಸಲು ಪ್ರಾರಂಭಿಸಲಾಗಿದೆ.</td></tr>
<tr><td>ಇ)</td><td>ಕಳೆದ 2 ವರ್ಷಗಳಲ್ಲಿ ವಸತಿ ಯೋಜನೆಗೆ ಸಂಬಂಧಪಟ್ಟಂತೆ ರಾಜ್ಯ ಸರ್ಕಾರ ವೆಚ್ಚ ಮಾಡಿರುವ ಮೊತ್ತ ಎಷ್ಟು? (ವಿವರ ನೀಡುವುದು)</td><td>ಕಳೆದ 2 ವರ್ಷಗಳಲ್ಲಿ ಹಿಂದಿನ ಶ್ರೇಣಿಯ ಮನೆಗಳನ್ನೊಳಗೊಂಡಂತೆ ಬೆಂಗಳೂರು ನಗರ ಜಿಲ್ಲೆಯಲ್ಲಿ ವಿವಿಧ ವಸತಿ ಯೋಜನೆಗಳಡಿ ಕೇಂದ್ರ ಸರ್ಕಾರದ ಅನುದಾನವು ಸೇರಿದಂತೆ ವಸತಿ ಮತ್ತು ಮೂಲಭೂತ ಸೌಕರ್ಯಗಳಡಿ ರಾಜ್ಯ ಸರ್ಕಾರದಿಂದ ರೂ.355.85ಕೋಟಿಗಳ ಅನುದಾನವನ್ನು ವೆಚ್ಚ ಮಾಡಲಾಗಿದ್ದು, ಯೋಜನಾವಾರು ವಿವರ ಈ ಕೆಳಗಿನಂತಿದೆ.
<table>
<tr><th>ಯೋಜನೆ</th><th>ಖರ್ಚು ಮಾಡಲಾದ ಅನುದಾನ (ರೂ.ಕೋಟಿಗಳಲ್ಲಿ)</th></tr>
<tr><td>ಡಾ.ಬಿ.ಆರ್.ಅಂಬೇಡ್ಕರ್ ನಿವಾಸ್</td><td>1.16</td></tr>
<tr><td>ಪಿ.ಎಮ್.ಎ ವೈ ನಗರ</td><td>3.04</td></tr>
<tr><td>ಪಿ.ಎಮ್.ಎ ವೈ ಗ್ರಾಮೀಣ</td><td>0.15</td></tr>
<tr><td>ವಾಜಪೇಯಿ ನಗರ ವಸತಿ</td><td>0.80</td></tr>
<tr><td>ಪಿ.ಎಮ್.ಎ ವೈ ನಗರ - AHP</td><td>350.70</td></tr>
<tr><td>ಒಟ್ಟು</td><td>355.85</td></tr>
</table></td></tr>
</table>

ಸಂಖ್ಯೆ: ವಇ 192 ಹೆಚ್‌ಎಫ್‌ಎ 2025]

**(ಬಿ.ಝಡ್. ಜಮೀರ್ ಅಹಮದ್ ಖಾನ್)**
ವಸತಿ, ವಕ್ಫ್, ಮತ್ತು ಅಲ್ಪ ಸಂಖ್ಯಾತರ
ಕಲ್ಯಾಣ ಸಚಿವರು.